<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.274/2020</u>

| | | | |
|---|---|---|---|
| ಹೆಸರು | : | ರವಿಕುಮಾರ್ | ಸಿ .ಡಬ್ಲ್ಯೂ:4 |
| ತಂದೆ ಹೆಸರು | : | ನಾಗರಾಜು | ಪಿ .ಡಬ್ಲ್ಯೂ:3 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಎನ್ ಹೊಸಹಳ್ಳಿ | |

ಸಾಕ್ಷಿಯನ್ನು ದಿಃ 03-08-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಕಲಂ **299** ಸಿ ಆರ್ ಪಿ ಸಿ ರಡಿಯಲ್ಲಿ ಸಾಕ್ಷಿಯು ಮುಖ್ಯ ವಿಚಾರಣೆ **ಸಹಾಯಕ ಸರಕಾರಿ ಅಭಿಯೋಜಕರಿಂದಃ**</u>

ಮೃತ , ನರಸಮ್ಮ ನನ್ನ ಅಜ್ಜಿ , ಮೃತ ರಾಮಯ್ಯ ನನ್ನ ದೊಡ್ಡಪ್ಪ , ಮೃತ ಗೌರಮ್ಮ ಚಿಕ್ಕಮ್ಮ ಮತ್ತು ವಸಂತಕುಮಾರ್ ನನಗೆ ಗೊತ್ತಿಲ್ಲ .

ಈ ಅಪಘಾತದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ . ಅಪಘಾತ ಯಾರ ತಪ್ಪಿನಿಂದ ಮತ್ತು ಯಾವ ವಾಹನದ ತಪ್ಪಿನಿಂದ ಅಪಘಾತವಾಯಿತು ಎಂದು ಗೊತ್ತಿಲ್ಲ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ . ನಾನು ಯಾವುದೇ ಅಪಘಾತಗೊಂಡು ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ . ಸಾಕ್ಷಿಗೆ ಗಾಯದ ಪ್ರಮಾಣ ಪತ್ರ ವನ್ನು ತೋರಿಸಲಾಗಿ ಅದರ ಬಗ್ಗೆ ಮಾಹಿತಿ ಇಲ್ಲ ಎಂ ದು ತಿಳಿಸಿದ್ದಾರೆ . ಸಾಕ್ಷಿಯು ಅಲ್ಲಗಳೆದ ದಾಖಲೆಯನ್ನು ನಿಪಿ -5 ಎಂದು ಗುರುತಿಸಲಾಯಿತು . ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ , ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ -6 ಎಂದು ಗುರುತಿಸಲಾಯಿತು .

ಆರೋಪಿತರನ್ನು ನೋಡಿದರೆ ಗುರುತಿಸಲಾಗುತ್ತದೆಯೇ ಎಂದರೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ . ಆರೋಪಿತರು ಗೈರು ಹಾಜರಿದ್ದು ಅವರ ವಿರುದ್ಧ ಉದ್ಘೋಷಣಾ ಆದೇಶ ಜಾರಿಯಾಗಿರುತ್ತದೆ . ವಾಹನಗಳನ್ನು ನೋಡಿದರೆ ಗುರುತಿಸಲಾಗುತ್ತದೆಯೇ ಎಂದರೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ